ಶ್ರಿ ಗೋವಿಂದ ಎಂ. ಕಾರಜೋಳ :– 2005–06ನೇ ಸಾಲಿನಲ್ಲಿ 8.5 ಕೋಟಿ ರೂಪಾಯಿ ತವು ಗಂಗಾ ಕಲ್ಯಾಣ ಯೋಜನೆಯಲ್ಲಿ ಎಸ್.ಸಿ.ಅವರಿಗೆ ಇಟ್ಟಿದ್ದೀರಿ. ಎಸ್‌ಟಿ ನವರಿಗು 8.5 ಕೋಟಿ ರೂಪಾಯಿ ಇಟ್ಟಿದ್ದೀರಿ. ಎಸ್‌ಸಿ ಜನಾಂಗ ಜಾಸ್ತಿ ಇರುವುದರಿಂದ ಇವತ್ತು ಸುಮಾರು 85 ಲಕ್ಷ ರಾಜ್ಯದಲ್ಲಿ ಎಸ್‌ಸಿ ಜನಾಂಗ ಇದ್ದಾರೆ. ಅದಕ್ಕಾಗಿ ಈ 8.5 ಕೋಟಿ ರೂಪಾಯಿ ಸಾಕಾಗುವುದಿಲ್ಲ. ಒಂದು 20 ಕೋಟಿ ರೂಪಾಯಿಯನ್ನಾದರೂ ತಾವು ಕೊಡಬೇಕಾಗುತ್ತದೆ. ಜನಸಂಖ್ಯೆ ಪ್ರಮಾಣದ ಮೇಲೆ ಕೊಡಬೇಕಾಗುತ್ತದೆ. ಅದಕ್ಕೆ ದಯವಿಟ್ಟು 20 ಕೋಟಿ ರೂಪಾಯಿ ತಾವು ಕೊಡುತ್ತೀರಾ ಹೇಗೆ?

ಡಾ: ವೈ. ನಾಗಪ್ಪ :– ನೀವು ಹೇಳುವುದರಲ್ಲಿ ಸತ್ಯಾಂಶ ಇದೆ. ಅದರ ಮೇಲೆ ಖಂಡಿತ ಪರಿಶೀಲನೆ ಮಾಡುತ್ತೇನೆ, ಆ ವ್ಯವಸ್ಥೆ ಮಾಡುತ್ತೇವೆ.

ಕೊಳ್ಳೇಗಾಲ ಕ್ಷೇತ್ರದಲ್ಲಿ ಮೆಟ್ರಿಕ್ ಹಾಗೂ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಿಗೆ ಹೆಚ್ಚುವರಿ ಪ್ರವೇಶ ನೀಡುವುದು

518 (5911) : **ಶ್ರೀಮತಿ ಶ್ರೀ ಬಾಲರಾಜ್ ಎಸ್. (ಕೊಳ್ಳೇಗಾಲ)**: ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊಳ್ಳೇಗಾಲ ಕ್ಷೇತ್ರದಲ್ಲಿ ಮೆಟ್ರಿಕ್ ಹಾಗೂ ಮೆಟ್ರಿಕ್ ನಂತರದ ಹಾಸ್ಟೆಲ್‌ಗಳಲ್ಲಿ ಹೆಚ್ಚಿನ ಪ್ರವೇಶಕ್ಕೆ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಅತೀ ಹೆಚ್ಚು ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗ / ಹಿಂದುಳಿದ ವರ್ಗಗಳು ಇರುವ ಈ ಕ್ಷೇತ್ರದಲ್ಲಿ ಹೆಚ್ಚುವರಿ ಪ್ರವೇಶ ನೀಡುವ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ;

ಇ) ಹೊಸದಾಗಿ ಹಾಸ್ಟೆಲ್ ತೆರೆಯಲು ಕ್ರಮ ಕೈಗೊಳ್ಳಲಾಗಿದೆಯೆ;

ಈ) ಈ ಕ್ಷೇತ್ರದಲ್ಲಿ ನೂತನವಾಗಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ತೆರೆಯಲು ಸರ್ಕಾರ ಕ್ರಮ ಕೈಗೊಂಡಿದೆಯೆ;

ಉ) ಇಲ್ಲವಾದಲ್ಲಿ, ಈ ಸಾಲಿನಲ್ಲಿ ಮಂಜೂರು ಮಾಡಲು ಕ್ರಮ ಕೈಗೊಳ್ಳಲಾಗುವುದೆ;

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಹೌದು.

ಆ) 2005–06ನೇ ಸಾಲಿನಲ್ಲಿ ಸಂಖ್ಯಾಬಲ ಹೆಚ್ಚಳಕ್ಕಾಗಿ ಪ್ರಸ್ತಾವನೆ ಬಂದಿದ್ದು, ಹೆಚ್ಚುವರಿ ಆಯವ್ಯಯ ಲಭ್ಯತೆ ಆಧರಿಸಿ ಪರಿಶೀಲಿಸಲಾಗುವದು.

ಇ) ಹೊಸ ವಿದ್ಯಾರ್ಥಿ ನಿಲಯಗಳ ಪ್ರಾರಂಭಕ್ಕಾಗಿ ಆಯವ್ಯಯದ ಲಭ್ಯತೆಯನ್ನು ಆಧರಿಸಿ ಪರಿಶೀಲಿಸಲಾಗುವುದು.

ಉತ್ತರ (ಈ) ಮತ್ತು (ಉ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘವು 2005–06ನೇ ಸಾಲಿನಲ್ಲಿ 43 ನೂತನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಿದೆ. ಸ್ಥಳಗಳ ಆಯ್ಕೆಯನ್ನು ಮಾಡಲಾಗುತ್ತಿದೆ.

ಶ್ರೀ ಎಸ್. ಬಾಲರಾಜ್ : ಮಾನ್ಯ ಉಪಾಧ್ಯಕ್ಷರೇ, ನಾನು ಕೇಳಿರುವ ಪ್ರಶ್ನೆ ತಮಗೆ ಇದನ್ನು ನಾನು ಹೇಳಲೇಬೇಕು. ಕೊಳ್ಳೇಗಾಲ ಕ್ಷೇತ್ರದಲ್ಲಿ ಮೆಟ್ರಿಕ್ ಹಾಗೂ ಮೆಟ್ರಿಕ್‌ನಂತರದ ಹಾಸ್ಟೆಲ್‌ಗಳಲ್ಲಿ ಹೆಚ್ಚಿನ ಪ್ರವೇಶಕ್ಕೆ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೆ. ಹೌದು ಎಂದು ಉತ್ತರ ಹೇಳಿದ್ದಾರೆ. ಹಾಗೆಯೇ ಹೆಚ್ಚು ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ : ಹಿಂದುಳಿದ ವರ್ಗಗಳು ಇರುವ ಈ ಕ್ಷೇತ್ರದಲ್ಲಿ ಹೆಚ್ಚುವರಿ ಪ್ರವೇಶ ನೀಡುವ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ ಸಂಖ್ಯಾಬಲ ಹೆಚ್ಚಳಕ್ಕಾಗಿ ಪ್ರಸ್ತಾವನೆ ಬಂದಿದ್ದು ಹೆಚ್ಚುವರಿ ಅಯವ್ಯಯ ಆಧರಿಸಿ ಪರಿಶೀಲಿಸಲಾಗುವುದು ಎಂದು ಹೇಳಿದ್ದಾರೆ. ಹಾಗೆಯೇ ಹೊಸದಾಗಿ ಹಾಸ್ಟೆಲ್ ತೆರೆಯಲು ಕ್ರಮ ಕೈಗೊಳ್ಳಲಾಗಿದೆಯೇ ಎಂದು ಕೇಳಿದ್ದೇನೆ. ಅದನ್ನು ಕೂಡ ಅದೇ ರೀತಿ ಪರಿಶೀಲಿಸಲಾಗುವುದು ಎಂದು ಉತ್ತರ ಕೊಟ್ಟಿದ್ದಾರೆ. ಮತ್ತೆ ನೂತನವಾಗಿ ನಮ್ಮ ಕ್ಷೇತ್ರಕ್ಕೆ ಮೊರಾರ್ಜಿ ದೇಸಾಯಿ ವಸತಿ ಶಾಲೆ ತೆರೆಯಲು ಸರ್ಕಾರ ಕ್ರಮ ಕೈಗೊಂಡಿದೆಯೇ ಎಂದು ಕೇಳಿದ್ದೇನೆ ಮತ್ತು ಇಲ್ಲವಾದಲ್ಲಿ ಈ ಸಾಲಿನಲ್ಲಿ ಮಂಜೂರು ಮಾಡುತ್ತೀರಾ ಎಂದೂ ಕೂಡ ಕೇಳಿದ್ದೇನೆ. ಅದಕ್ಕೂ ಕೂಡ ಪ್ರಾರಂಭಿಸಲು ಉದ್ದೇಶಿಸಲಾಗಿದೆ. ಆಯ್ಕೆಯನ್ನು ಮಾಡಲಾಗುತ್ತಿದೆ ಎಂದು ಉತ್ತರ ಹೇಳಿದ್ದಾರೆ. ನಾನು ಕೇಳಿರುವ ಪ್ರಶ್ನೆಗೆ ಎಲ್ಲಾ ಪರಿಶೀಲಿಸಲಾಗುತ್ತಿದೆ, ಪರಿಶೀಲಿಸಲಾಗುವುದು, ಆಯ್ಕೆಯನ್ನು ಮಾಡಲಾಗುವುದು, ಉದ್ದೇಶಿಸಿದೆ ಎಂದು ಹೇಳಿದರೆ ನಾನು ಪ್ರಶ್ನೆ ಕೇಳುವುದರಲ್ಲಿ ಏನು ಅರ್ಥ ಇದೆ? ದಯಮಾಡಿ ನಿಖರವಾಗಿ ಈ ಸಾಲಿನಲ್ಲಿ ಮಾಡಿಕೊಡುತ್ತೇವೆ ಎನ್ನತಕ್ಕದಾದರೂ ಹೇಳಬೇಕು. ಇಲ್ಲದೇ ಇದ್ದರೆಇಲ್ಲ ಎಂಬ ಅಂಶ ಆದರೂ ಗೊತ್ತಾದರೆ ನಾವು ಸಮಾಧಾನವಾಗಿ ಕುಳಿತುಕೊಳ್ಳಬಹುದು. ಈ ತರಹದ ಉತ್ತರ ಕೊಡುವುದರಿಂದ ಬಹುಶಃ ಇದು ಯಾವುದಕ್ಕೂ ಪ್ರಯೋಜನ ಬರುವುದಿಲ್ಲ ಈ ಪ್ರಶ್ನೆ. ದಯಮಾಡಿ ಮಾನ್ಯ ಸಚಿವರು ದಯಮಾಡಿ ಅದನ್ನು ಕೊಡುತ್ತೀರಾ ಎನ್ನುವುದಕ್ಕೆ ತಾವು ಒಂದು ಉತ್ತರವನ್ನು ಒದಗಿಸಿಕೊಡಬೇಕು. ನನ್ನ ಕ್ಷೇತ್ರ ಒಂದು ಮೀಸಲು ಕ್ಷೇತ್ರ. ಮೀಸಲು ಕ್ಷೇತ್ರಕ್ಕೆ ಜನಸಂಖ್ಯೆಗೆ ಮತ್ತು ಬೇಕಾಗಿರತಕ್ಕ ಅವಶ್ಯಕತೆಗೆ ಅನುಗುಣವಾಗಿ ನೀವು ಹೆಚ್ಚುವರಿಯನ್ನು ಮಾಡಿಕೊಡುವುದಕ್ಕೆ ಸಾಧ್ಯತೆ ಇದೆಯಾ? ಅದನ್ನು ಮಾಡಿಕೊಡುವ ಬಗ್ಗೆ ತಾವು ಹೇಳಬೇಕು.

ಶ್ರೀ ಹೆಚ್. ಕೆ. ಕುಮಾರ ಸ್ವಾಮಿ (ಮೂಡಿಗಳ) :– ಮಾನ್ಯ ಉಪಾಧ್ಯಕ್ಷರೆ, ಈ ಹಾಸ್ಟೆಲ್‌ಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುವರಿ ಬಗ್ಗೆ ಸುಮಾರು 10 ವರ್ಷದ ಹಿಂದೆ ಇದ್ದಂತಹ ಸಂಖ್ಯೆಯನ್ನೇ ಈಗ ಮುಂದುವರಿಸಿದ್ದಾರೆ. ಈಗ ಒತ್ತಡ ಜಾಸ್ತಿ ಇದೆ. ಸಂಖ್ಯೆ ಜಾಸ್ತಿ ಬರುತ್ತಿದ್ದಾರೆ. ದಯಮಾಡಿ ಮಾನ್ಯ ಸಚಿವರು ಹೊಸ ಹಾಸ್ಟೆಲ್‌ಗಳನ್ನು ತೆರೆಯಬೇಕು. ಇಲ್ಲ ಎಂದರೆ ಸಂಖ್ಯೆಯನ್ನು ಹೆಚ್ಚಳ ಮಾಡಬೇಕು. ಎರಡನೆಯದಾಗಿ ಮಾನ್ಯ ಬಾಲರಾಜ್ ಅವರು ಮೊರಾರ್ಜಿ ಶಾಲೆಗಳನ್ನು ತೆರೆಯುವುದರ ಬಗ್ಗೆ ಕೇಳಿದ್ದಾರೆ. ಅದು ಪರಿಶಿಷ್ಟರು ಆಮೇಲೆ ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರ, ಬಡವರು ಯಾವ ಕ್ಷೇತ್ರದಲ್ಲಿದ್ದಾರೆ ಅಲ್ಲಿ ತೆರೆಯಬೇಕು ಎಂದು ಕಾನೂನಿನಲ್ಲಿ ಕೂಡ ಅವಕಾಶ ಇದೆ. ಮೀಸಲು ಕ್ಷೇತ್ರಗಳಿಗೆ ನಾವು ಆದ್ಯತೆ ಕೊಡಿ ಎಂದು ಕೇಳಿದರೆ ಕೊಟ್ಟಿಲ್ಲ. ನನ್ನ ಕ್ಷೇತ್ರಕ್ಕೂ ಕೇಳಿದ್ದೇನೆ. ಮೀಸಲು ಕ್ಷೇತ್ರಗಳನ್ನು ಬಿಟ್ಟು ಇವರು ಎಲ್ಲಾ ಜನರಲ್ ಕ್ಷೇತ್ರಗಳಿಗೆ ಮಂಜೂರು ಮಾಡುತ್ತಿದ್ದಾರೆ. ಮೊರಾರ್ಜಿ ಶಾಲೆಗಳನ್ನು ಸರ್ಕಾರ ತೆರೆದಿರತಕ್ಕ ಉದ್ದೇಶ ಏನು? ಈ ಉದೇಶವನ್ನೇ ಮರೆತು ನೀವು ಎಲ್ಲಾ ಬೇರೆ ಬೇರೆ ಕ್ಷೇತ್ರಗಳಲ್ಲಿ ಶಾಲೆ ತೆರೆದರೆ ಮೀಸಲು ಕ್ಷೇತ್ರದವರು ಎಲ್ಲಿಗೆ ಹೋಗಬೇಕು?

ಉಪಾಧ್ಯಕ್ಷರು :– ಡಿಬೇಟ್ ಮಾಡಬೇಡಿ. ಪ್ರಶ್ನೆ ಕೇಳಿ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ :– ದಯಮಾಡಿ ಮೀಸಲು ಕ್ಷೇತ್ರಗಳಿಗೆ ಕಡ್ಡಾಯವಾಗಿ ಅಲ್ಲಿ ಆದ್ಯತೆಯ ಮೆಲೆ ಮೊದಲು ಅಲ್ಲಿ ಮಂಜೂರು ಮಾಡಬೇಕು.

ಡಾ: ವೈ. ನಾಗಪ್ಪ :– ಮಾನ್ಯ ಉಪಾಧ್ಯಕ್ಷರೇ, ಸರ್ಕಾರಕ್ಕೆ ಆ ತರಹ ಏನು ಮಲತಾಯಿ ಧೋರಣೆ ಖಂಡಿತ ಇಲ್ಲ. ಏಕೆಂದರೆ ಇವತ್ತು ಈ ದೇಶವನ್ನು ತೆಗೆದುಕೊಳ್ಳಿ, ಈ ರಾಜ್ಯವನ್ನು ತೆಗೆದುಕೊಳ್ಳಿ. ಸುಮಾರು 75–80 ಪರ್ಸೆಂಟ್ ಯಾವ ರಾಜ್ಯಕ್ಕೇ ಹೋಗಲಿ ಇವತ್ತು ಎಸ್‌ಸಿ:ಎಸ್‌ಟಿ ಬ್ಯಾಕ್‌ವರ್ಡ್ ಕ್ಲಾಸ್ ಇರುವುದು ನಾನೇ ಮೊನ್ನೆ ಚಾಮರಾಜನಗರ ಜಿಲ್ಲೆಗೆ ಒಂದು ಫಂಕ್ಷನ್‌ಗೆ ಹೋದಾಗ ಅಲ್ಲಿರತಕ್ಕಂಥ ಎಂಎಲ್‌ಎ ರವರನ್ನು ಕರೆದು ನಾನು ಒಂದು ಮೊರಾರ್ಜಿ ದೇಸಾಯಿ ಹಾಸ್ಟೆಲ್ ಕೊಟ್ಟಿದ್ದೇನೆ. ಅವರು ಕೇಳದೇನೇ ಕೊಟ್ಟಿದ್ದೇನೆ. ಖಂಡಿತಾ ನಿನ್ನೆ ನಾನು ಡಿಮ್ಯಾಂಡ್ಸ್ ಮೇಲೆ ಉತ್ತರ ಕೊಡುವಾಗ ಹಾಸ್ಟೆಲ್ ಸೀಟುಗಳನ್ನು ಹೆಚ್ಚಿಗೆ ಮಾಡುತ್ತೇವೆಂದು ಹೇಳಿದ್ದೇನೆ. ಹಾಸ್ಟೆಲ್‌ಗಳನ್ನು ಹೆಚ್ಚಿಗೆ ಮಾಡುತ್ತೇವೆಂತಲೂ ಹೇಳಿದ್ದೇನೆ. ಸದಸ್ಯರ ಒತ್ತಾಯ ಬಹಳ ಇದೆ. ಮಂತ್ರಿಗಳ ಒತ್ತಾಯ ಕೂಡ ಬಹಳ ಇದೆ. ಇದರ ಬಗ್ಗೆ ಗಮನ ಹರಿಸಿ ಈ ಒಂದು ವರ್ಗದ ಜನರಿಗೆ ನಮ್ಮ ಸೇವೆ ಸಲ್ಲಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಎಸ್. ಬಾಲರಾಜ್ :– ನನ್ನ ಪ್ರಶ್ನೆಗೆ ಕೊನೆಗೆ ಉತ್ತರನೇ ಸಿಕ್ಕಲಿಲ್ಲ. ಮಾನ್ಯ ಮಂತ್ರಿಗಳು ಉತ್ತರನೇ ಕೊಡಲಿಲ್ಲ. ನನಗೆ ನನ್ನ ಕ್ಷೇತ್ರಕ್ಕೆ ಪ್ರಾರಂಭ ಮಾಡುತ್ತೀರಾ ಎಂದು ಕೇಳಿದ್ದೇನೆ. ದಯವಿಟ್ಟು ಅದಕ್ಕೆ ಮಾಡುತ್ತೇವೆ ಅಥವಾ ಈಗ ಆಗುವುದಿಲ್ಲ ಎನ್ನುವ ಉತ್ತರವನ್ನಾದರೂ ಕೊಡಬೇಕು. ಇಲ್ಲ ಎಂದರೆ ನೋಡಲಾಗುವುದು ಎಂದರೆ ಖಂಡಿತ ಪ್ರಶ್ನೆಗೆ ಅರ್ಥನೇ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ್ :– ಒಂದು ಕ್ಲಾರಿಫಿಕೇಶನ್ ಕೇಳುತ್ತೇನೆ. ತಾವು ಒಂದೇ ಸಾರಿ ತಾವು ದಯವಿಟ್ಟು ಉತ್ತರ ಹೇಳಬೇಕು.

ಉಪಾಧ್ಯಕ್ಷರು :– ಮಾನ್ಯ ಕಾರಜೋಳ ಅವರೇ, ಅವರದ್ದು ಆಗಲಿ. ಮತ್ತೆ ಕನ್‌ಫ್ಯೂಸ್ ಮಾಡುತ್ತೀರಿ.

ಶ್ರೀ ಗೋವಿಂದ ಎಂ. ಕಾರಜೋಳ್ :– ಅವರಿಗೆ ಸಪೋರ್ಟಿಂಗ್ ಆಗಿ ಹೇಳುತ್ತೇನೆ.

ಉಪಾಧ್ಯಕ್ಷರು :– ಇಲ್ಲ ಆಮೇಲೆ ಬಹಳ ಕನ್‌ಫ್ಯೂಸ್ ಮಾಡುತ್ತೀರಿ. ಮಾನ್ಯ ಬಾಲರಾಜ್ ಅವರ ಪ್ರಶ್ನೆಗೆ ಮಾತ್ರ ಈಗ ಉತ್ತರ.

ಡಾ: ವೈ. ನಾಗಪ್ಪ :– ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಾಲರಾಜ್ ಅವರು ಒಂದು ಮೀಸಲು ಕ್ಷೇತ್ರದಿಂದ ಬಂದಿರತಕ್ಕಂಥ ಶಾಸಕರು. ಅವರು ನಾವು ಇತ್ತೀಚಿನಿಂದ ಬಹಳ ಸ್ನೇಹಿತರಾಗಿದ್ದೇವೆ. ಅವರ ಜಿಲ್ಲೆಗೆ ನಾನು ಹೋದಮೇಲೆ ಸ್ನೇಹಿತರಾಗಿದ್ದೇವೆ. ನಿನ್ನೆ ನಾನು ಹೇಳಿದ್ದೇನೆ. ಖಂಡಿತ ಸಂಖ್ಯಾಬಲವನ್ನು ಹೆಚ್ಚಿಗೆ ಮಾಡುತ್ತೇವೆ. ಹಾಸ್ಟೆಲ್‌ಗಳನ್ನು ಕೊಡುತ್ತೇವೆ ಎಂದು ನಿನ್ನೆನೇ ಹೇಳಿದ್ದೇನೆ. ಮಾನ್ಯ ಉಪ ಮುಖ್ಯಮಂತ್ರಿಗಳೂ ಇಲ್ಲೇ ಇದ್ದರು. ನಮಗೆ ಸ್ವಲ್ಪ ಕಾಲಾವಕಾಶ ಕೊಡಿ, ಖಂಡಿತ ಮಾಡಿಕೊಡುತ್ತೇವೆ.

ಶ್ರೀ ಎಸ್. ಬಾಲರಾಜ್ :– ಕೊಡುತ್ತೇವೆ ಎಂದು ಭರವಸೆ ಆದರೂ ಕೊಡಿ.

ಡಾ: ವೈ. ನಾಗಪ್ಪ :– ಯಾವಾಗಲೂ ಕೊಡುತ್ತೇವೆಂದು ಭರವಸೆ ಕೊಡಕೂಡದು.

ಉಪಾಧ್ಯಕ್ಷರು :– ಕೊಡುತ್ತೇವೆಂದು ಹೇಳಿದ್ದಾರಲ್ಲಾ.

ಡಾ: ವೈ. ನಾಗಪ್ಪ :– ಏಕೆಂದರೆ ಹೇಳಿ ಮಾಡದವನು ಅಧಮ ಎಂದು ಹೇಳುತ್ತಾರೆ. ಹೇಳಿಯೂ ಮಾಡದವನು ಅಧಮ. ನಾನು ಅಧಮ ಆಗಲಿಕ್ಕೆ ತಯಾರಿಲ್ಲ.

ಉಪಾಧ್ಯಕ್ಷರು :– ಬಾಲರಾಜ್, ಈಗ ಅವರು ಒಪ್ಪಿಕೊಂಡ ಹಾಗೇನೇ. ಮತ್ತೆ ಈಗ ಪ್ರಶ್ನೆ ಬೇಡ.

ಶ್ರೀ ಸಿ. ಟಿ. ರವಿ :– ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಂತ್ರಿಗಳೇ ಹೇಳಿದ್ದೇ ನಿಜ ಆಗುವುದಾದರೆ ಹೇಳಿಯೂ ಮಾಡದವನು ಅಧಮ ಎಂದರೆ ಬಹಳ ಜನ ಅವರೇ ಆಗಿ ಬಿಡುತ್ತಾರೆ.

ಉಪಾಧ್ಯಕ್ಷರು :– ಕುಳಿತುಕೊಳ್ಳಿ. ಅವರೀಗ ಒಪ್ಪಿಕೊಂಡಿದ್ದಾರೆ. ಪ್ರಶ್ನೆಗೆ ಉತ್ತರ ಸಿಕ್ಕಿದೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಗೋವಿಂದ ಎಂ ಕಾರಜೋಳ :– ಇದಕ್ಕೆ ಪೂರಕವಾಗಿ ಇನ್ನೊಂದು ಪ್ರಶ್ನೆ ಇದೆ.

ಡಾ: ವೈ. ನಾಗಪ್ಪ :– ಸಾಕಷ್ಟು ಕೇಳಿದ್ದೀರಿ.

ಶ್ರೀ ಗೋವಿಂದ ಎಂ ಕಾರಜೋಳ :– ಉತ್ತರ ಕರ್ನಾಟಕದಲ್ಲಿ ಕಾಲೇಜ್ ಹಾಸ್ಟೆಲ್‌ಗಳು ಇಲ್ಲ. ನಮ್ಮಲ್ಲಿ ಏನಾಗಿದೆ ಎಂದರೆ ಮೆಟ್ರಿಕ್ ನಂತರ ಹುಡುಗರು ಓದಲಿಕ್ಕೆ ಸಾಧ್ಯವಾಗುತ್ತಿಲ್ಲ. ಎಸ್‌ಸಿ:ಎಸ್‌ಟಿ ಮಕ್ಕಳು ಹಾಗೂ ಗ್ರಾಮೀಣ ಪ್ರದೇಶದ ಮಕ್ಕಳು ಓದಲು ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ನಾನು ಸರ್ಕಾರಕ್ಕೆ ಏನು ವಿನಂತಿ ಮಾಡುತ್ತೇನೆಂದರೆ ಪ್ರತಿ ಸಬ್ ಡಿವಿಜನ್, ರೆವಿನ್ಯೂ ಹೆಡ್‌ಕ್ವಾರ್ಟರ್‌ನಲ್ಲಿ ಒಂದೊಂದು ಎಸ್‌ಸಿ:ಎಸ್‌ಟಿ ಕಾಲೇಜ್ ಹಾಸ್ಟೆಲ್‌ಗಳನ್ನು ತೆರೆದರೆ ಉತ್ತರ ಕರ್ನಾಟಕದ ಮಕ್ಕಳಿಗೆ ಓದಲು ಅನುಕೂಲ ಆಗುತ್ತದೆ. ಅದೇ ರೀತಿ ಈ ಕಡೆಯೂ ಎಲ್ಲಿ ಇಲ್ಲ. ಅಲ್ಲಿಯೂ ತೆರೆಯಬೇಕು. ಏಕೆಂದರೆ ಬರೇ ಉತ್ತರ ಕರ್ನಾಟಕದ ಸಲುವಾಗಿ ಹೇಳುತ್ತೇನೆಂದಲ್ಲ. ಅದಕ್ಕೆ ನಾವೇನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆಂದರೆ ಈ ವರ್ಷ ಕನಿಷ್ಟ ಒಂದು ಹತ್ತಾದರೂ ಕಾಲೇಜ್ ಹಾಸ್ಟೆಲನ್ನು ಎಸ್‌ಸಿ:ಎಸ್‌ಟಿ ಬಾಯ್ಸ್‌ಗೆ, ಗರ್ಲ್ಸ್‌ಗೆ ತಾವು ಪ್ರಾರಂಭ ಮಾಡುತ್ತೀರಾ ಹಾಗೆ ಎಂದು ಹೇಳಬೇಕು.

ಡಾ. ವೈ. ನಾಗಪ್ಪ :– ಸನ್ಮಾನ್ಯ ಉಪಾಧ್ಯಕ್ಷರೆ, ನಾನು ನಮ್ಮ ಆಫೀಸರ್ಸ್ ಜೊತೆ ಮೀಟಿಂಗ್ ಮಾಡಿದಾಗ I have insisted especially to open a Hostel for Girls students.

ಏಕೆಂದರೆ ಮೆಟ್ರಿಕ್ ಆದ ನಂತರ ಮನೆಯಲ್ಲಿ ಅವರನ್ನು ಕಾಲೇಜಿಗೆ ಕಳುಹಿಸುವುದಿಲ್ಲ. ಅದಕ್ಕೋಸ್ಕರ ಈ Post-metric Hostels are most essential from the point of view of these poor girls. ಖಂಡಿತ ಮಾಡುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ :– ಬಾಯ್ಸ್‌ಗೂ ಮಾಡಬೇಕು.

ಡಾ: ವೈ. ನಾಗಪ್ಪ :–ಬಾಯ್ಸ್‌ಗೂ ಮಾಡುತ್ತೇವೆ. ಇವತ್ತು Girls are more important. ಬಾಯ್ಸ್ ಇವತ್ತು ಎಲ್ಲಾದರೂ ಒಂದು ರೂಮಿನಲ್ಲಿದ್ದುಕೊಂಡು ಓದಬಹುದು. ಆದರೆ ಪೇರೆಂಟ್ಸ್‌ಗೆ ಒಂದು ಅಶ್ಯೂರೆನ್ಸ್. ಇವತ್ತು ಹಾಸ್ಟೆಲ್ ಇದ್ದಾಗ they ar secured and assured. ಅದಕ್ಕೋಸ್ಕರ ಆದಷ್ಟು ನಾವು ಹೆಣ್ಣು ಮಕ್ಕಳಿಗೆ ಪ್ರಾಧಾನ್ಯತೆ ಕೊಡುತ್ತೇವೆ. ಬಾಯ್ಸ್‌ಗೆ ಕೊಡಬಾರದು ಎಂದಲ್ಲ. ಅನುದಾನ ನೋಡಿಕೊಂಡು ಅವರಿಗೂ ನಾವು ಖಂಡಿತ ಕೊಡುತ್ತೇವೆ.

– – –

ಉಪಾಧ್ಯಕ್ಷರು :– ಡಾ: ಕೆ. ಅನ್ನದಾನಿ ಅವರು

(ಮಾನ್ಯ ಸದಸ್ಯರ ಗೈರು ಹಾಜರಿ)

ಕೆ. ಎನ್. ಕಿರಣ್ ಕುಮಾರ್

(ಮಾನ್ಯ ಸದಸ್ಯರ ಗೈರು ಹಾಜರಿ)

ಬಾಗೇಪಲ್ಲಿಯಲ್ಲಿ ಪರಿಶಿಷ್ಟ ಜನಾಂಗದ ವಿದ್ಯಾರ್ಥಿ ನಿಲಯ

521 (6097) : **ಶ್ರೀ ಶ್ರೀರಾಮರೆಡ್ಡಿ ಜಿ. ವಿ. (ಬಾಗೇಪಲ್ಲಿ) :** ಸಮಾಜ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬಾಗೇಪಲ್ಲಿ ಪಟ್ಟಣದಲ್ಲಿ ಪರಿಶಿಷ್ಟ ಜನಾಂಗದ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಹಾಸ್ಟೆಲ್ ಸೌಲಭ್ಯವಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಾಗೇಪಲ್ಲಿಯಲ್ಲಿ ಪರಿಶಿಷ್ಟ ಜನಾಂಗದ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗಾಗಿ ಪ್ರತ್ಯೇಕ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಯಾವ ಕ್ರಮ ಕೈಗೊಂಡಿದೆ?

ಡಾ: ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು) :

ಅ) ಹೌದು,

ಆ) ಬಾಗೇಪಲ್ಲಿಯಲ್ಲಿ ಪರಿಶಿಷ್ಟ ವರ್ಗದ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಮಂಜೂರಾತಿ ಕುರಿತು ಯಾವುದೇ ಪ್ರಸ್ತಾವನೆ ಬಂದಿರುವುದಿಲ್ಲ. 2004–05ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯವನ್ನು ಮಂಜೂರು ಮಾಡುವ ಪ್ರಸ್ತಾವನೆ ಪರಿಗಣಿಸಲಾಗಿದ್ದು. ಅನುದಾನದ ಕೊರತೆಯಿಂದಾಗಿ ಮಂಜೂರು ಮಾಡಿರುವುದಿಲ್ಲ.

ಇ) 2005–06ನೇ ಸಾಲಿನಲ್ಲಿ ಈ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದು.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :– ಮಾನ್ಯ ಉಪಾಧ್ಯಕ್ಷರೇ, ಉತ್ತರಗಳನ್ನು ಕೊಟ್ಟಿದ್ದಾರೆ. 2004–05ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯವನ್ನು ಮಂಜೂರು ಮಾಡುವ ಪ್ರಸ್ತಾವನೆ ಪರಿಗಣಿಸಲಾಗಿದ್ದು, ಅನುದಾನದ ಕೊರತೆಯಿಂದಾಗಿ ಮಂಜೂರು ಮಾಡಿರುವುದಿಲ್ಲ ಎಂದು ಹೇಳಿದ್ದಾರೆ. ಈ ತರಹ ತಾವು ಉತ್ತರ ಕೊಟ್ಟಿದ್ದೀರಿ. ನಾನು ಕೇಳಿರುವುದು ನಿರ್ದಿಷ್ಟವಾಗಿ ಅಲ್ಲಿ ಎಸ್‌ಟಿ ಜನಾಂಗದ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಗೆ ಇದೆ. ಅವರಿಗೆ ಪ್ರತ್ಯೇಕವಾದಂತಹ ಹಾಸ್ಟೆಲ್ ಬೇಕು ಎಂದು ಹೇಳಿ ಅಲ್ಲಿಂದ ಎರಡು ವರ್ಷದಿಂದ ಪ್ರಸ್ತಾವನೆಯನ್ನು ಕಳುಹಿಸುತ್ತಿದ್ದೇವೆ. ಇನ್ನೊಂದು ಕಡೆ ಆಡಿಟ್ ರಿಪೋರ್ಟ್‌ಗಳೆಲ್ಲಾ ಬರುತ್ತದೆ. ಕೋಟ್ಯಾಂತರ ರೂಪಾಯಿ ಎಸ್‌ಸಿ:ಎಸ್‌ಟಿ ಕಾರ್ಪೊರೇಷನ್‌ನಲ್ಲಿ ಹಣ ಖರ್ಚಾಗಿದೆ, ವಾಪಸ್ ಹೋಗುತ್ತಿದೆ. ಸರಿಯಾಗಿ ಉಪಯೋಗಕ್ಕೆ ಬರುತ್ತಿಲ್ಲ ಎಂದು, ನೀವು ಹಣ ಇಲ್ಲ, ಅದಕ್ಕೋಸ್ಕರ ಈ ವರ್ಷ ಮಂಜೂರು